ತಲುಪಿದ್ದಾಳೆ. ಹಾಗಿದ್ದರೆ ಅವಳ ಪ್ರೀತಿ ಒಂದು ನಾಟಕವಾಗಿತ್ತಾ? 'ಖಂಡಿತಾ ಅಲ್ಲ' ಎಂದು ಆಣೆ ಮಾಡಬಲ್ಲಳು ವೈಷ್ಣವಿ. ತನ್ನ ನೀರಸ ಬದುಕಿನಲ್ಲಿ ಅನಿರೀಕ್ಷಿತವಾಗಿ ಎದುರಾದ ಪ್ರೇಮಪರ್ವದ ರೋಮಾಂಚನವನ್ನು ಹೃತ್ಪೂರ್ವಕವಾಗಿ ಅವಳು ಸುಖಿಸಿದ್ದು ಹೌದು. ಪ್ರೀತಿಯ ಸಮ್ಮೋಹಿನೀ ಶಕ್ತಿಯಲ್ಲಿ ಕಳೆದುಹೋಗಿದ್ದು ಹೌದು. ಫಲ್ಗುಣನಿಗಾಗಿ ದೇಹದ ಅಣುಅಣುವೂ ಕಾತರಿಸಿ ಕಾಯುತ್ತಿದ್ದುದರ ಪರವಶತೆಗೆ ಮಿಡಿದಿದ್ದು ಹೌದು. ನಾಟಕದ ಪಾತ್ರಧಾರಿಗೆ ತಾನು ಕೇವಲ ಆ ಪಾತ್ರವನ್ನು ಆವಾಹಿಸಿಕೊಂಡಿರುವ ಪಾತ್ರಧಾರಿ ಎನ್ನುವುದು ಅರಿವಿದ್ದರೂ ಅದರಲ್ಲಿ ಸಂಪೂರ್ಣ ತಾದಾತ್ಮ್ಯ ಹೊಂದಿ ನಟಿಸುವಂತೆ ವೈಷ್ಣವಿ ಕೂಡಾ ಕ್ರಮಕ್ರಮೇಣ ಪಾತ್ರದ ವಶವರ್ತಿಯಾಗಿಬಿಟ್ಟಿದ್ದಳೆಂದರೆ ಅತಿಶಯೋಕ್ತಿಯಲ್ಲ. ಮತ್ತು ತಾನೇ ಆ ಪಾತ್ರ ಎನ್ನುವ ಭ್ರಮಾಧೀನ ಸ್ಥಿತಿಗೂ ಅವಳು ತಲುಪಿದ್ದಳು ಕೂಡಾ. ವಾಸ್ತವದ ಪರಿವೆ ಕಳೆದುಕೊಂಡಿದ್ದರೂ ಮೈಮೇಲಿನ ಎಚ್ಚರ ತಪ್ಪದ ಒಂದು ಭ್ರಾಮಕ ಪರಿಸ್ಥಿತಿ ಅದು. ಪವಾಡ ಸಾಧ್ಯವಾಗಬಹುದೆಂದು ನಂಬಿಕೊಂಡ ಸ್ಥಿತಿ ಅದು. ಆದರೆ, ನಿರ್ಣಾಯಕಗಳಿಗೆ ಬಂದಾಗ ಎಚ್ಚೆತ್ತುಕೊಂಡಿದ್ದಳು ವೈಷ್ಣವಿ. ಎಚ್ಚರಿಕೆಯ ನಡೆ ಇಟ್ಟಿದ್ದಳು. ತನ್ನನ್ನು ಪರೀಕ್ಷೆಗೊಡ್ಡುವುದಕ್ಕಾಗಿಯೇ ಅವಳು ನಿಬಂಧನೆ ಹಾಕಿದ್ದಳು ಎಂದು ಅರ್ಥ ಮಾಡಿಕೊಳ್ಳಲಿಲ್ಲ ಫಲ್ಗುಣ. ಅರ್ಥ ಮಾಡಿಕೊಂಡರೂ ಅದು ನಿಜವೋ, ಸುಳ್ಳೋ, ನಿಕಷಕ್ಕೊಡ್ಡುವ ಧೈರ್ಯ ಅವನಿಗೆ ಇರಲಿಲ್ಲ, ಮನಸ್ಸೂ... ಲಾಭದ ಪ್ರಲೋಭನೆ ಇರದಿದ್ದಲ್ಲಿ ಮುನ್ನುಗ್ಗಿ ಹೋಗುವುದರಲ್ಲಿ ಪ್ರಯೋಜನವೇನು ಎನ್ನುವ ಲೆಕ್ಕಾಚಾರವೇ? ಲೆಕ್ಕಾಚಾರದ ಹಿಂದೆ ಅವನ ಮಡದಿಯೂ ಇದ್ದಳೇ? ಹಣಕ್ಕಾಗಿ ಏನೂ ನಡೆಯುತ್ತದೆ, ನಡೆಯಬಹುದು. ಒಂದೊಮ್ಮೆ ಅವನು ತನ್ನ ನಿಬಂಧನೆಗೆ ಒಪ್ಪಿದಿದ್ದರೆ? ಏನಾಗುತ್ತಿತ್ತು? ಏನಾಗುತ್ತಿತ್ತೋ, ಬಿಡುತ್ತಿತ್ತೋ, ಅವನ ಪ್ರೀತಿ ಅನ್ನುವುದು ಲೆಕ್ಕಾಚಾರದ ಗೋಜಲಿನಲ್ಲಿ ಸಿಗದ ದೈವಿಕ ಪ್ರೀತಿಯಾಗಿ ಅವಳ ಮನದಲ್ಲಿ ಅವನಿಗೊಂದು ಉನ್ನತ ಸ್ಥಾನ ಸಿಕ್ಕುತ್ತಿದ್ದುದಂತೂ ನಿಜ.

ಏನೆಂದುಕೊಂಡರೂ ವೈಷ್ಣವಿಯ ಹೃದಯಕ್ಕೆ ಆರದ ಘಾಸಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಬಹುಶಃ ಆ ಗಾಯ ಮಾಯಲಿಕ್ಕೂ ಇಲ್ಲ. ಮನಸ್ಸನ್ನು ಎಷ್ಟೇ ಸಮಾಧಾನ ಪಡಿಸಿಕೊಳ್ಳಲೆತ್ನಿಸಿದರೂ ಅಂತರಂಗದ ಕ್ಷೋಭೆ ಶಾಂತವಾಗುತ್ತಿಲ್ಲ. ಜ್ವಾಲೆ ತಣ್ಣಗಾಗುತ್ತಿಲ್ಲ...

ಊಟ, ತಿಂಡಿಗೂ ಆಸ್ಥೆ ತೋರಿಸದೆ ಉದಾಸಭಾವದಲ್ಲಿರುವ ಮಗಳ ಮಾನಸಿಕ ತಲ್ಲಣದ ಕುರಿತು ಕಿಂಚಿತ್ತೂ ಅರಿವಿಲ್ಲದ ರಾಯರು ಸದಾ ಉದ್ಗರಿಸುತ್ತಿರುತ್ತಾರೆ,

"ಎಲ್ಲಿ ಹೋದ ಇವನು? ತಿಂಗಳುಗಟ್ಟಲೆ ನಾಪತ್ತೆ..."

## ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ಅವರ ಬಹುತೇಕ ಕತೆಗಳ ವಸ್ತು.